ಒ ಎಸ್ ನಂ.**7091/2022**
ಪಿ.ಡಬ್ಲ್ಯೂಃ**1**

**ದಿನಾಂಕಃ 06.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಅಶೋಕ್ ಕುಮಾರ್ ಎಂ.ಸಿ. 1 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು 1 ರಿಂದ 10 ನೇ ತರಗತಿಯವರೆಗೆ ಬೆಂಗಳೂರಿನ ಕೇಂಬ್ರಿಡ್ಜ್ ಶಾಲೆಯಲ್ಲಿ ಓದಿರುತ್ತೇನೆ. ಪಿ ಯು ಸಿ ಮತ್ತು ಬಿ.ಎಸ್‌ಸಿ ಯನ್ನು ಅಲ್ ಅಮೀನ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಓದಿರುತ್ತೇನೆ. ಬಿ.ಎಸ್‌ಸಿ ವಾರ್ಷಿಕ ಪರೀಕ್ಷೆಗಳನ್ನು ಬರೆಯುವುದರ ಮುಖಾಂತರ ಓದಿರುತ್ತೇನೆ. ನಾನು ಬಿ. ಎಸ್ ಸಿ ಓದುವಾಗ ಸುಧಾಮನಗರ, ನಂ.22 ಅನ್ನಿಕುರ, 3 ನೇ ಕ್ರಾಸ್, ಬೆಂಗಳೂರು-27 ಇಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು. ಆ ಕಾಲಕ್ಕೆ ನನ್ನ ಜೊತೆ ನನ್ನ ತಂದೆ-ತಾಯಿ ಮತ್ತು 1 ನೇ ಪ್ರತಿವಾದಿ ಇದ್ದರು. ನಾನು ಬಿ.ಎಸ್‌ಸಿ ಓದುವಾಗ ನನ್ನ ಶಾಲಾ ಫೀ ನ್ನು ನನ್ನ ತಂದೆಯೇ ತುಂಬಿರುತ್ತಾರೆ. ಅದೇ ಕಾಲೇಜಿನಲ್ಲಿ ಎಂ.ಎಸ್ ಸಿ ಬಯೋಟೆಕ್ನಾಲಜಿಯನ್ನು ಓದಿರುತ್ತೇನೆ. ಎಂ. ಎಸ್ ಸಿ ಓದುವಾಗ ಸೆಮಿಸ್ಟರ್ ಪದ್ದತಿ ಇತ್ತು. ಸ್ಕಾಲರ್ ಶಿಫ್ ಮೇಲೆ ಕಾಲೇಜ್ ಫೀ ತುಂಬಿದ್ದೆನು. ಸ್ಕಾಲರ್ ಶಿಫ್ ಪಡೆದ ಬಗ್ಗೆ ದಾಖಲೆಗಳನ್ನು ಕೊಟ್ಟಿರುವುದಿಲ್ಲ. ಎಂ.ಎಸ್ ಸಿ ಎರಡು ವರ್ಷದ ಕೋರ್ಸ್ ಆಗಿತ್ತು. 2004 ರಲ್ಲಿ ಪೂರ್ತಿಗೊಳಿಸಿದೆನು.

2007 ರಲ್ಲಿ ಐಸಿಐಸಿಐ ಲೈಫ್ ಇನ್ಸೂರೆನ್ಸ್ ನಲ್ಲಿ ಕೆಲಸ ಸಿಕ್ಕಿತ್ತು. 2004 ರಿಂದ 2007 ರವರೆಗೆ ನಾನು ಐಐಎಸ್‌ಸಿ ಪರೀಕ್ಷೆಗಾಗಿ ತಯಾರಿ ಮಾಡುತ್ತಿದ್ದೆನು. ನಾನು ಐಐಎಸ್‌ಸಿ ಪರೀಕ್ಷೆಯಲ್ಲಿ ಪಾಸಾಗಲಿಲ್ಲ. 2004 ರ ನಂತರ ನೆಲಮಂಗಲದಲ್ಲಿ ಇಂಟರ್ ಶಿಫ್ ಮಾಡುವಾಗ ವಾರಕ್ಕೆ ಒಂದು ಬಾರಿ ಬೆಂಗಳೂರಿಗೆ ಬರುತ್ತಿದ್ದೆನು ಮತ್ತು ನನ್ನ ತಂದೆಯಿಂದ ವಾರಕ್ಕೆ ರೂ.3,500-4,500/- ರೂಪಾಯಿ ಹಣ ಕೇಳುತ್ತಿದ್ದೆನು ಎನ್ನುವುದು ಸರಿಯಲ್ಲ. ನನ್ನ ತಂದೆಗೆ ಕೆ.ಆರ್ ಮಾರ್ಕೆಟ್ ನಲ್ಲಿ ಬೇರಿಂಗ್ ಆಂಡ್ ಟೂಲ್ಸ್ ಎನ್ನುವ ಅಂಗಡಿ ಇತ್ತು ಎನ್ನುವುದು ನಿಜ. ಬೇರಿಂಗ್ ಆಂಡ್ ಟೂಲ್ಸ್ ಅಂಗಡಿಯನ್ನು ನನ್ನ ತಂದೆ ಮಾರಾಟ ಮಾಡಿದ್ದಾರೆ. ಯಾವ ವರ್ಷದಲ್ಲಿ ಮಾರಾಟ ಮಾಡಿದ್ದಾನೆ ಎನ್ನುವುದು ನನಗೆ ಗೊತ್ತಿಲ್ಲ. 2006 ರಿಂದ 2007 ರವರೆಗೆ ಜನತಾ ಬೇರಿಂಗ್ಸ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದೆನು. 2004 ರಿಂದ 2006 ರವರೆಗೆ ನಾನು ಪರೀಕ್ಷೆಗಾಗಿ ತಯಾರಿ ಮಾಡುತ್ತಿದ್ದೆನು ನಾನು ಯಾವುದೇ ಖರ್ಚು ಮಾಡುತ್ತಿರಲಿಲ್ಲ.

ಒ ಎಸ್ ನಂ.**7091/2022**
ಪಿ.ಡಬ್ಲ್ಯೂಃ**1**

ನನ್ನ ಹೆಂಡತಿಯ ಹೆಸರು ಜಬೀನಾ. 2006 ರಲ್ಲಿ ಅವಳನ್ನು ಮದುವೆಯಾಗಿದ್ದೆನು. ನಮ್ಮದು ಪ್ರೇಮ ವಿವಾಹವಾಗಿತ್ತು. ಪ್ರೀತಿಸಿದ 6 ತಿಂಗಳ ನಂತರ ಮದುವೆಯಾಗಿರುತ್ತೇವೆ. ನಾನು ಸೈದಾನಿ ರವರ ಮಗ ಫಜುಲು ಬಳಿ ಯಾವುದೇ ಸಾಲ ಪಡೆದಿರಲಿಲ್ಲ. ನಾನು ಜಬೀನಾ ಮತ್ತು ಫಜುಲು ಇವರಿಂದ ಅವರಿಗೆ ನೌಕರಿ ಕೊಡಿಸುವುದಾಗಿ ರೂ.3 ಲಕ್ಷ ಹಣ ಪಡೆದಿದ್ದೆ ಎನ್ನುವುದು ಸರಿಯಲ್ಲ. ಅವರಿಗೆ ಕೆಲಸ ಕೊಡಿಸದೇ ಮತ್ತು ಹಣ ಕೂಡ ಕೊಡದೇ ನಾನು ಸಿಕ್ಕಿ ಹಾಕಿಕೊಂಡಿದ್ದೆ ಎನ್ನುವುದು ಸರಿಯಲ್ಲ. ಅವರು ಹಣ ಕೊಡುವವರೆಗೆ ನನ್ನನ್ನು ಬಿಡುವುದಿಲ್ಲ ಎಂದು ಹೇಳಿ ನನ್ನ ತಂದೆಗೆ ಫೋನ್ ಮಾಡಿ ಹೇಳಿದರು ಎನ್ನುವುದು ಸರಿಯಲ್ಲ.

ಲೇಃ ಮೆಹಬೂಬ್ ಖಾನ್ ನನಗೆ ಚಿಕ್ಕಪ್ಪ ಆಗಬೇಕು. ನನ್ನ ತಂದೆ ಮೆಹಬೂಬ್ ಖಾನ್ ಬಳಿಯಿಂದ ರೂ.3 ಲಕ್ಷ ಹಣ ಪಡೆದುಕೊಂಡು, ಫಜುಲು ರವರಿಗೆ ಹಣ ಕೊಟ್ಟು ನನ್ನನ್ನು ಬಿಡಿಸಿಕೊಂಡು ಹೋದರು ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿ ನನಗಿಂತ 4 ವರ್ಷ ಹಿರಿಯವಳು. 1 ನೇ ಪ್ರತಿವಾದಿ ಅಬ್ಬಾಸ್‌ಖಾನ್ ಕಾಲೇಜಿನಲ್ಲಿ ಬಿ.ಎಸ್ ಸಿ ಓದಿರುತ್ತಾಳೆ. 1 ನೇ ಪ್ರತಿವಾದಿ ಇವತ್ತಿನವರೆಗೂ ಮದುವೆಯಾಗಿರುವುದಿಲ್ಲ. ನನ್ನ ತಂದೆ ತಾಯಿ ಅವಳಿಗೆ ಮದುವೆ ಮಾಡಲು ಪ್ರಯತ್ನ ಮಾಡಿದರು, ಆದರೆ ಅವಳು ಮದುವೆಗೆ ಒಪ್ಪಲಿಲ್ಲ.

2007 ರಲ್ಲಿ ನನ್ನ ತಂದೆ ಆರೋಗ್ಯವಾಗಿದ್ದರು. ಅದರ ನಂತರ ನನ್ನ ತಂದೆಗೆ ಹೃದಯ ಸಂಬಂಧಿ ಕಾಯಿಲೆ ಇತ್ತು. ನನ್ನ ತಂದೆಗೆ ನಾನೇ ನಿಸರ್ಗ ಹೆಲ್ತ್ ಕ್ಲಿನಿಕ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದೆನು. ನನ್ನ ತಂದೆಯ ಔಷಧಿಗೆ ತಿಂಗಳಿಗೆ ರೂ.3000/- ಖರ್ಚು ಆಗುತ್ತಿತ್ತು ಅದನ್ನು ನಾನೇ ಭರಿಸಿದ್ದೆನು. 2016 ರಿಂದ 2019 ರವರೆಗೆ ವೈದ್ಯಕೀಯ ಖರ್ಚನ್ನು ನಾನೇ ನೋಡಿಕೊಂಡಿದ್ದೆನು. ಸದರಿ ಹಣವನ್ನು ನಗದು ರೂಪದಲ್ಲಿ ಕೊಟ್ಟಿದ್ದೇನೆ. ಡಿಸೆಂಬರ್-2018 ರಿಂದ ಜನವರಿ-2019 ರವರೆಗೆ ನನ್ನ ತಂದೆ ಅಗಡಿ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನನ್ನ ತಂದೆಯ ಜೊತೆ ನಾನು ಆಸ್ಪತ್ರೆಯಲ್ಲಿ ಇರಲಿಲ್ಲ. ನಾನು ಪ್ರತಿವಾದಿ 1 ಮತ್ತು 2 ರವರಿಗೆ ಹಣ ಕೊಡುತ್ತಿದ್ದೆನು ಅವರು ನನ್ನ ತಂದೆಗೆ ಚಿಕಿತ್ಸೆ ಕೊಡಿಸುತ್ತಿದ್ದರು. ನಾನು ನನ್ನ ತಂದೆಯ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದೆನು. ನಾನು ನನ್ನ ತಂದೆಯ ಚಿಕಿತ್ಸೆಗೆ ಯಾವುದೇ ಹಣ ಕೊಟ್ಟಿಲ್ಲ ಮತ್ತು ಯಾವತ್ತು ಕೂಡ ಆತನ ಆರೋಗ್ಯದ ಬಗ್ಗೆ ವಿಚಾರಿಸಿಲ್ಲ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಯೇ ನನ್ನ ತಂದೆಗೆ ಚಿಕಿತ್ಸೆ ಕೊಡಿಸುತ್ತಿದ್ದಳು ಮತ್ತು ಚಿಕಿತ್ಸೆಯ ವೆಚ್ಚ ಭರಿಸುತ್ತಿದ್ದಳು ಎನ್ನುವುದು ಸರಿಯಲ್ಲ.

ಒ ಎಸ್ ನಂ.**7091/2022**
**ಪಿ.ಡಬ್ಲ್ಯೂ:1**

2007 ರಿಂದ 2009 ರವರೆಗೆ ನಾನು ನೆಲಮಂಗಲದಲ್ಲಿ ವಾಸವಾಗಿದ್ದೆನು. ಆ ಸಮಯಲ್ಲಿ ಇಂಟರ್ ಶಿಫ್ ಮಾಡುತ್ತಿದ್ದೆನು ಮತ್ತು ವಾರಕ್ಕೊಂದು ಬಾರಿ ಬಂದು ನನ್ನ ತಂದೆಯಿಂದ ಹಣ ಪಡೆದುಕೊಂಡು ಹೋಗುತ್ತಿದ್ದೆನು ಎನ್ನುವುದು ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**